
## ಸೀತೆಯ ಅಡುಗೆಮನೆ




**ರಾಮಚಂದ್ರ** ಗಾಂಧಿ ಅವರ 'Sita's Kitchen: A testimony of faith and inquiry' ಕೃತಿ 'ಸೀತೆಯ ಅಡುಗೆಮನೆ'ಯ ಹೆಸರಿನಲ್ಲಿ ಕನ್ನಡಕ್ಕೆ ಬಂದಿದೆ. ಜಿ. ರಾಜಶೇಖರ ಕೃತಿಯ ಅನುವಾದಕರು. ಅಯೋಧ್ಯೆಗೆ ಹೋಗುವವರಿಗೆಲ್ಲ ರಾಮನೇ ಆಕರ್ಷಣೆಯ ಕೇಂದ್ರ. ಮಾಧ್ಯಮಗಳಿಗೂ ರಾಮನೇ ಕಣ್ಮಣಿ. ಆದರೆ, ಅಯೋಧ್ಯೆಯಲ್ಲಿ ರಾಮಚಂದ್ರ ಗಾಂಧಿಯವರ ಗಮನಸೆಳೆಯುವುದು 'ಸೀತಾ ಕಿ ರಸೋಯಿ'. 'ಜನ್ಮಭೂಮಿ'ಯ ಆವರಣದಲ್ಲೇ ಇರುವ ಈ ಅಡುಗೆಮನೆಯ ಮೂಲಕ ರಾಮಚಂದ್ರ ಗಾಂಧಿ ಪುರಾಣವನ್ನು ಮರುಸೃಷ್ಟಿಸಲು ಪ್ರಯತ್ನಿಸಿದ್ದಾರೆ. ರಾಮಜನ್ಮಭೂಮಿ ಚಳವಳಿಯ ರಾಜಕಾರಣ ಮತ್ತು ಸಾಮಾಜಿಕ ಪರಿಣಾಮಗಳ ಹಿನ್ನೆಲೆಯಲ್ಲಿ ಈ ಕೃತಿಗೆ ವಿಶೇಷ ಮಹತ್ವವಿದೆ.


ಅಡುಗೆಮನೆಯನ್ನು– ಅದರಲ್ಲೂ ಸೀತೆಯ ಅಡುಗೆಮನೆಯನ್ನು– ರೂಪಕವಾಗಿಸಿಕೊಂಡು ಕಳೆದುಹೋದ ಪುರಾಣವನ್ನು ಮರಳಿ ಕಂಡುಕೊಳ್ಳುವ ಈ ಕಥನ, ಅದೇ ಕಾಲಕ್ಕೆ ಸಮಕಾಲೀನ ತವಕತಲ್ಲಣಗಳನ್ನು ಅರ್ಥ ಮಾಡಿಕೊಳ್ಳಲು ಕನ್ನಡಿಯೂ ಆಗುತ್ತದೆ. ಈ ವಿಶಿಷ್ಟ ಕೃತಿಯನ್ನು ಕನ್ನಡದ ಬಹುಮುಖ್ಯ ಚಿಂತಕರಲ್ಲಿ ಒಬ್ಬರಾದ ಜಿ. ರಾಜಶೇಖರ ಕನ್ನಡಕ್ಕೆ ತಂದಿದ್ದು, ಅವರ ಅನುಪಸ್ಥಿತಿಯಲ್ಲಿ ಪ್ರಕಟವಾಗಿರುವ 'ಸೀತೆಯ ಅಡುಗೆಮನೆ' ರಾಜಶೇಖರರ ತಾತ್ವಿಕತೆಯನ್ನು ನೆನಪಿಸುವ ಪ್ರಯತ್ನದಂತೆಯೂ ಇದೆ. ಪ್ರವೇಶಿಕೆ ರೂಪದ ಎನ್.ಎ.ಎಂ. ಇಸ್ಮಾಯಿಲ್ ಅವರ ಮಾತುಗಳು, ಕೃತಿಯ ಚಾರಿತ್ರಿಕ ಸಂದರ್ಭವನ್ನು ಅರ್ಥ ಮಾಡಿಕೊಳ್ಳಲು ತೋರುಬೆರಳಿನಂತಿವೆ.

'ಸೀತೆಯ ಅಡುಗೆಮನೆ' ಮುದ್ರಣದ ಸೊಗಸಿನಿಂದಲೂ ಗಮನಸೆಳೆಯುತ್ತದೆ. ಪ್ರಕಾಶಕರು, ಕಾಗದದ ದುಂದಿಗೆ ಕಡಿವಾಣ ಹಾಕಿದ್ದರೆ, ಪುಸ್ತಕದ ಬೆಲೆ ಓದುಗಸ್ನೇಹಿಯಾಗಬಹುದಿತ್ತು.

ಲೇ: ರಾಮಚಂದ್ರ ಗಾಂಧಿ; ಕ: ಜಿ. ರಾಜಶೇಖರ; ಪು: 288; ಬೆ: ₹ 350; ಪ್ರ: ಋತುಮಾನ, ಬೆಂಗಳೂರು.

---

## ವಖಾರಿಧೂಸ




**ಹಿರಿಯ** ನಾಟಕಕಾರ ಡಿ.ಎಸ್. ಚೌಗಲೆ ಅವರ ಹೊಸ ನಾಟಕ 'ವಖಾರಿಧೂಸ'. ವಖಾರಿ ಎಂದರೆ ತಂಬಾಕನ್ನು ಶುಚಿಗೊಳಿಸುವ ಗೋದಾಮು, ಧೂಸ ಎಂದರೆ ದೂಳು. ಈ ಅರ್ಥಗಳು ಕೂಡಿಕೊಂಡಿರುವ 'ವಖಾರಿಧೂಸ', ರೂಪಕದ ನೆಲೆಗಟ್ಟಿನಲ್ಲಿ ಸಹೃದಯರೊಂದಿಗೆ ಸಂವಾದ ನಡೆಸುವ ಪ್ರಯೋಗಶೀಲ ರಂಗಪ್ರಯತ್ನವಾಗಿದೆ.

ಪುರಾಣ, ಚರಿತ್ರೆಯಿಂದ ಪ್ರತಿಮೆಗಳನ್ನು ಹೆಕ್ಕಿಕೊಳ್ಳುವ ಚೌಗಲೆ ಅವರು, ಆ ಬಿಂಬಗಳನ್ನು ವರ್ತಮಾನದ ತವಕತಲ್ಲಣಗಳ ನೆಲೆಗಟ್ಟಿನಲ್ಲಿ ಪರೀಕ್ಷೆಗೊಡ್ಡುತ್ತಾರೆ. ವರ್ತಮಾನದ ವಿಷಮ ಸನ್ನಿವೇಶವನ್ನು ಕಲೆಯ ಬೆಳಕಿನಲ್ಲಿ ಶೋಧಿಸುವುದು ಅವರ ಎಲ್ಲ ನಾಟಕಗಳ ತವಕವಾಗಿದೆ. ಆ ಹಂಬಲ 'ವಖಾರಿಧೂಸ'ದಲ್ಲೂ ಸ್ಪಷ್ಟವಾಗಿದೆ. ಪ್ರಯೋಗದಲ್ಲಿ ಹೆಚ್ಚು ನಿಚ್ಚಳವಾಗಬಹುದಾದ ಈ ರಚನೆ, ಓದಿನ ಖುಷಿಯನ್ನೂ ಕೊಡಬಲ್ಲ ರಚನೆ.

ಲೇ: ಡಿ.ಎಸ್. ಚೌಗಲೆ; ಪು: 92; ಬೆ: ₹ 100; ಪ್ರ: ಸಪ್ನ, ಬೆಂಗಳೂರು. ಫೋನ್: 080-40114455.